
ಹೋಗಿಯಾದರೂ ಮದುವೆಯಾಗುವುದೇ ಸರಿ. ಅಂತಹ ಸನ್ನಿವೇಶದಲ್ಲೂ ರಾಜು ನಿರ್ಧಾರ ಮಾಡಿಬಿಟ್ಟ! ಅಷ್ಟರಲ್ಲಿ, ಉಮಾಳ ಮನೆಯವರ ಆಗಮನವೂ ಆಗಿ, ಇತ್ತ ಅಪ್ಪಬಾವನ ಜೊತೆಗೆ, ಚಿಕ್ಕಪ್ಪದೊಡ್ಡಪ್ಪರೂ ಜೊತೆಯಾಗಿ ಜೋರು ಜಗಳವಾಯಿತು. ಎಷ್ಟು ಹೊತ್ತು ಜಗಳ ಆಡಿದರೋ, ಕೊನೆಗೆ ಅವರವರೇ ಒಂದು ತೀರ್ಮಾನಕ್ಕೆ ಬಂದವರಂತೆ, ಊರಿನ ಪಂಚಾಯ್ತಿ ಸೇರಿಸುವ ಮಾತನಾಡುತ್ತಾ ಸರಿದುಹೋಗಿದ್ದರು. ಇದ್ಯಾವುದಕ್ಕೂ ತನಗೂ ಸಂಬಂಧವೇ ಇಲ್ಲವೆಂಬಂತೆ ಪ್ರೇಕ್ಷಕ ಮಾತ್ರನಾಗಿದ್ದ ರಾಜುವಿನ ಕಣ್ಣ ಮುಂದೆ ಇದ್ದದ್ದು ಉಮಾ ಮಾತ್ರ. ಇತ್ತ ಉಮಾಳ ಸ್ಥಿತಿಯೇನೂ ಭಿನ್ನವಾಗಿರಲಿಲ್ಲ. ಅವಳೂ ಮನಸಾರೆ ರಾಜುವನ್ನು ಒಪ್ಪಿಕೊಂಡಿದ್ದಳು. ತೊನ್ನಿನ ಕಾರಣದಿಂದ ಹಲವಾರು ವರಮಹಾಶಯರಿಂದ ತಿರಸ್ಕೃತಗೊಂಡಿದ್ದ ಉಮಾಳ ಕಣ್ಣಲ್ಲಿ ರಾಜು ಬೆಳೆದು ನಿಂತಿದ್ದ. ತೊನ್ನಿನ ಬಗ್ಗೆ ಆತನಿಗೆ ಗೊತ್ತಿತ್ತು. ಆದರೆ, ಅದೊಂದು ಸಮಸ್ಯೆ ಎಂದು ಆತನಿಗೆ ಅನ್ನಿಸಿರಲಿಲ್ಲ. ಅಂದು ಸಂಜೆ ಚಿಕ್ಕಮ್ಮನ ಗುಡಿಯ ಸಮೀಪ ಉಮಾ ರಾಜು ಭೇಟಿಯಾದರು. ಪಂಚಾಯ್ತಿ ನಡೆದರೆ ಏನಾಗುತ್ತದೆ ಎಂಬುದು ಇಬ್ಬರಿಗೂ ಗೊತ್ತಿತ್ತು. ಜಾತಿ, ದೇವರು, ಮೈಲಿಗೆ ಇತ್ಯಾದಿ ವಿಷಯಗಳನ್ನೆತ್ತಿ, ಇಬ್ಬರನ್ನು ದೂರ ಮಾಡುವ ಪಂಚಾಯ್ತಿಗಳನ್ನು ಅವರು ನೋಡಿದ್ದರು. ಮನೆಯವರೆಂದೂ ತಮ್ಮ ಜಾತಿಬುದ್ಧಿಯನ್ನು ಬಿಟ್ಟು ಮದುವೆಗೆ ಒಪ್ಪುವುದಿಲ್ಲ ಎಂಬುದೂ ಸ್ಪಷ್ಟವಾಗಿತ್ತು. ಸರಿ, ಅಲ್ಲಿಂದಲೇ, ಉಟ್ಟಬಟ್ಟೆಯಲ್ಲಿಯೇ, ಅಡ್ಡದಾರಿಯಲ್ಲಿ ಕ್ರಾಸಿನವರೆಗೆ ನಡೆದು, ಅರಸೀಕೆರೆಗೆ ಹೋಗುತ್ತಿದ್ದ ಆಟೋ ಹತ್ತಿದ್ದರು. ಅಲ್ಲಿಂದ ಬೆಂಗಳೂರಿಗೆ ಲಾರಿ ಪ್ರಯಾಣ. ಆಗ ಅವರಿಬ್ಬರ ಬಳಿಯಿದ್ದ ಹಣವನ್ನು ಒಟ್ಟುಗೂಡಿಸಿದರೂ ಒಂದು ಸಾವಿರ ದಾಟುತ್ತಿರಲಿಲ್ಲ! ಬೆಂಗಳೂರಿನಲ್ಲಿಳಿದ ಅವರು ಮಾಡಿದ ಮೊದಲ ಕೆಲಸವೆಂದರೆ, ತಾಳಿಯೊಂದನ್ನು ಖರೀದಿಸಿದ್ದು. ಬಾಗಿಲು ಮುಚ್ಚಿದ್ದ ಗುಡಿಯೊಂದರ ಮುಂದೆ ನಿಂತು, ಉಮಾಳ ಕುತ್ತಿಗೆಗೆ ರಾಜು ತಾಳಿ ಕಟ್ಟಿದ್ದ. ಅಲ್ಲಿಂದ ಶುರುವಾಗಿದ್ದು ಉಳಿವಿಗಾಗಿ ಹೋರಾಟ. ಕಟ್ಟಡ ಕಾಮಗಾರಿಯಲ್ಲಿ ಕೂಲಿಗಳಾಗಿ ಒಂದಷ್ಟು ದಿವಸ ಕೆಲಸ ಮಾಡಿದ ಮೇಲೆ, ಹೇಗೋ ಒಂದು ಕೊಠಡಿ ಬಾಡಿಗೆಗೆ ಹಿಡಿದು, ಸಂಸಾರ ಹೂಡಿದ್ದರು. ವಿದ್ಯಾವಂತೆಯಾಗಿದ್ದ ಉಮಾ, ಯಾವುದೋ ಗಾರ್ಮೆಂಟ್‌ನಲ್ಲಿ ಕೆಲಸಕ್ಕೆ ಸೇರುವಲ್ಲಿ, ನಂತರ ಗಂಡನನ್ನೂ ಅಲ್ಲಿಗೆ ಸೇರಿಸುವಲ್ಲಿ ಯಶಸ್ವಿಯಾಗಿದ್ದಳು. ಇಷ್ಟೆಲ್ಲಾ ಆಗುವುದರೊಳಗೆ ಎರಡು ವರ್ಷಗಳೇ ಕಳೆದಿದ್ದವು. ನಂತರ ಉಮಾ ಖಾಸಗಿ ಶಾಲೆಯೊಂದರಲ್ಲಿ ಟೀಚರ್ ಕೆಲಸ ಗಿಟ್ಟಿಸಿಬಿಟ್ಟಳು. ಇತ್ತ ರಾಜು ಗಾರ್ಮೆಂಟಿನಲ್ಲಿಯೇ ಹಗಲಿರುಳೆನ್ನದೆ ದುಡಿಯತೊಡಗಿದ. ತನ್ನ ಅಪ್ಪ, ಊರವರ ಮೇಲೆಲ್ಲಾ ಆತನಿಗೆ ಸಿಟ್ಟು ಬರುತ್ತಿತ್ತು. ಆಗೆಲ್ಲಾ ಅವರೆಲ್ಲರೆದುರಿಗೆ ನಾವು ಬದುಕಿ ತೋರಿಸಬೇಕು ಎಂದುಕೊಳ್ಳುತ್ತಿದ್ದ. ಒಂದು ಕೊಠಡಿಯ ಮನೆಯಾಗಿತ್ತು. ಉಮಾ ಮುದ್ದಾದ ಮಗಳಿಗೆ ತಾಯಿಯಾದಳು. ರಾಜು ಅಪ್ಪನಾದ. ಆತನಿಗಂತೂ ಮಗಳ ಮುಖ ನೋಡಿದಾಗಲೆಲ್ಲಾ ಅತ್ಯಂತ ಸಂತೋಷವಾಗುತ್ತಿತ್ತು. ಈ ಸಂತೋಷದಲ್ಲಿ ಅಪ್ಪ ಅವ್ವನೂ ಜೊತೆಗಿದ್ದರೆ ಚೆನ್ನಾಗಿರುತ್ತಿತ್ತು ಅನ್ನಿಸುತ್ತಿತ್ತು. ಇವರು ಓಡಿ ಬಂದ ಮೇಲಿನ ಗಲಾಟೆಯೆಲ್ಲಾ ಕಳೆದ ಮೇಲೆ, ಒಂದೆರಡು ಬಾರಿ ಊರಿಗೆ ಹೋಗಿ ಬಂದಿದ್ದ. ಅಪ್ಪನ ಕೋಪ ತಣ್ಣಗಾಗಿರಲಿಲ್ಲ. ಮೂರು ವರ್ಷಗಳ ನಂತರ ಉಮಾ ಗಂಡುಮಗುವಿಗೆ ಜನ್ಮ ನೀಡಿದಳು. ಈಗಲಾದರೂ ಅಪ್ಪನ ಕೋಪ ತಣ್ಣಗಾಗಬಹುದು, ಅವ್ವ ಮೊಮ್ಮಕ್ಕಳನ್ನು ನೋಡಿ ನಮ್ಮನ್ನು ಕ್ಷಮಿಸಬಹುದು ಎಂದುಕೊಂಡಿದ್ದ ರಾಜುವಿಗೆ ನಿರಾಶೆಯಾಗಿತ್ತು. ಸಂಸಾರ ಬೆಳೆದಂತೆ, ಜವಾಬ್ದಾರಿಯೂ ಹೆಚ್ಚಿ, ಊರಿನ ಕಡೆಗೆ ಹೆಚ್ಚು ಗಮನಹರಿಸಲಾಗಿರಲಿಲ್ಲ ಅವನಿಗೆ. ಮಗಳಿಗೆ ಹತ್ತು ವರ್ಷ ತುಂಬುವಷ್ಟರಲ್ಲಿ ಜವಾಬ್ದಾರಿಯೂ ಹೆಚ್ಚಿತ್ತು. ಬೆಂಗಳೂರಿನಲ್ಲಿ ಇಬ್ಬರು ಮಕ್ಕಳ ಶಿಕ್ಷಣ ಸುಲಭದ ಮಾತಾಗಿರಲಿಲ್ಲ. ಆದರೆ, ಉಮಾ ಎಲ್ಲವನ್ನೂ ಸಂಭಾಳಿಸಿಕಂಡು, ಗಂಡನೊಂದಿಗೆ ಒಂದಷ್ಟು ನೆಮ್ಮದಿಯ ದಿನಗಳನ್ನು ಕಳೆದಿದ್ದು ಸುಲಭದ ಮಾತಾಗಿರಲಿಲ್ಲ. ಅಂದು ಊರು ಬಿಟ್ಟ ಉಮಾ ಮತ್ತೆಂದೂ ಊರಿಗೆ ಕಾಲಿಟ್ಟಿರಲಿಲ್ಲ. ಎರಡೂ ಮನೆಯವರು ಒಪ್ಪಿ ಕರೆಯುವ ತನಕ ಅಲ್ಲಿಗೆ ಕಾಲಿಡುವುದಿಲ್ಲ ಎಂದು ಅವಳು ನಿರ್ಧರಿಸಿಬಿಟ್ಟಿದ್ದಳು. ರಾಜು ಮಕ್ಕಳೊಂದಿಗೆ ಆಗಾಗ ಹೋಗಿ ಬರುತ್ತಿದ್ದ. ಮಕ್ಕಳನ್ನು ಉಮಾಳ ಅಪ್ಪಅವ್ವನ ಮನೆಗೂ ಕರೆದುಕೊಂಡು ಹೋಗುತ್ತಿದ್ದ. ಊರವರ ಕುಹಕಗಳಿಗೇನೂ ಕಡಿಮೆ ಇರಲಿಲ್ಲ. ಆದರೆ, ಉಮಾಳ ಉಪದೇಶದ ಕಾರಣದಿಂದಲೋ ಏನೋ, ರಾಜು ಸ್ಥಿತಪ್ರಜ್ಞನಾಗಿದ್ದ. ಉಮಾ, ಅತ್ತೆಮಾವನ ಬಗ್ಗೆ ಎಂದೂ ಕೆಟ್ಟ ಮಾತನಾಡಿರಲಿಲ್ಲ. ಮಕ್ಕಳಿಗೆ ಫೋನ್ ಮಾಡಿಕೊಟ್ಟು, ಅಜ್ಜ ಅಜ್ಜಿಯರೊಂದಿಗೆ



ಮಾತನಾಡಿಸುತ್ತಿದ್ದಳು. ರಾಜುವಿನ ಬೇಕು ಬೇಡಗಳ ಕಡೆಗೂ ಅಷ್ಟೇ ಗಮನ ಕೊಡುತ್ತಿದ್ದಳು. ಮುಂಗೈಯಲ್ಲಿದ್ದ ತೊನ್ನು ಮೊದಲಿದ್ದಷ್ಟೇ ಇತ್ತು. ಅವರಿಗೆಂದೂ, ಮಕ್ಕಳಿಗೂ ಸಹ ಅದೊಂದು ಸಮಸ್ಯೆ ಅನ್ನಿಸಲೇ ಇಲ್ಲ. ಗಾರ್ಮೆಂಟಿನಲ್ಲಿ ಕಷ್ಟಪಟ್ಟು ಸೂಪರ್‌ವೈಸರ್ ಹುದ್ದೆಗೇರಿದ್ದ ರಾಜುವಿಗೆ ಜೀವನ ಸುಂದರವಾಗಿ ಕಾಣತೊಡಗಿತ್ತು. ಮಗಳು ನನ್ನಪ್ಪ ಗಾರ್ಮೆಂಟ್ ಸೂಪರ್‌ವೈಸರ್ ಎಂದು ಮುದ್ದುಮುದ್ದಾಗಿ ಹೇಳುವುದನ್ನು ಕೇಳಿ ಪುಳಕಗೊಳ್ಳುತ್ತಿದ್ದ. ಆದರೆ, ಮಗಳು ಏಳನೆಯ ತರಗತಿಯಲ್ಲಿದ್ದಾಗ ರಾಜು ಕೆಲಸ ಕಳೆದುಕೊಳ್ಳಬೇಕಾಯಿತು. ಮೇಲಿನವನೊಬ್ಬ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ರಾಜುವಿನ ಕೆಲಸವನ್ನು ಬಲಿ ತೆಗೆದುಕೊಂಡಿದ್ದ. ಅಲ್ಲಿಯವರೆಗೂ ಯಾರೂ ಕೇಳದಿದ್ದ, ರಾಜುವಿನ ಪಿಯುಸಿ ಫೇಲ್ ಮುನ್ನೆಲೆಗೆ ಬಂದು, ಹಿಂಬಡ್ತಿ ನೀಡಲಾಯಿತು. ಮತ್ತೆ ಅಲ್ಲಿ ಕೆಲಸ ಮಾಡಲು ಮನಸ್ಸೊಪ್ಪದೆ, ರಾಜು ಕೆಲಸ ಬಿಟ್ಟುಬಿಟ್ಟ. ಆಗಲೂ ಉಮಾ ಗಂಡನನ್ನು ಬಿಟ್ಟುಕೊಡಲಿಲ್ಲ. ಉಮಾಳ ಸಂಬಳ ಮಾತ್ರದಿಂದಲೇ ಮನೆ ನಡೆಯುವುದು ಕಷ್ಟವೆಂದು ಇಬ್ಬರಿಗೂ ತಿಳಿದಿತ್ತು. ಮತ್ತೇನು ಕೆಲಸ ಮಾಡುವುದು? ಬೇರೆ ಗಾರ್ಮೆಂಟುಗಳಲ್ಲಿ ಕೆಲಸ ಕೇಳಿದರೆ ಮತ್ತೆ ಪಿಯುಸಿ ಫೇಲ್ ಭೂತ ಕಾಡಿಯೇ ಕಾಡುತ್ತದೆ. ಈ ಒತ್ತಡದಲ್ಲಿ ರಾಜು ಒಂದೆರಡು ಬಾರಿ ಕುಡಿದು ಮನೆಗೆ ಬಂದಾಗ ಉಮಾ ಹೆದರಿಹೋದಳು. ಬದುಕು ಕಟ್ಟಿಕೊಳ್ಳುವ ದಾರಿಯಲ್ಲಿ ಕುಡಿತ ತಮ್ಮನ್ನು ಎಲ್ಲಿಗೆ ತಂದು ನಿಲ್ಲಿಸುತ್ತದೆ ಎಂಬುದು ಅವಳಿಗೆ ಅರ್ಥವಾಗಿತ್ತು. ಸಮಯ ನೋಡಿ ಗಂಡನೊಂದಿಗೆ ಮುಕ್ತವಾಗಿ ಮಾತನಾಡಿದಳು. ರಾಜುವಿಗೆ ತನ್ನ ತಪ್ಪಿನ ಅರಿವಾಗಿತ್ತು. ಅವಳ ಕಾಳಜಿಯನ್ನು ಕಂಡು ಸಂತೋಷವೂ ಆಗಿತ್ತು. ಅದೇ ಸಂತೋಷದಲ್ಲಿ, ಉಮಾಳಿಗೆ ಮಾತುಕೊಟ್ಟಿದ್ದ. ಇನ್ನೆಂದೂ ಕುಡಿಯುವುದಿಲ್ಲ... ಯಾವ ಕೆಲಸವನ್ನಾದರೂ ಮಾಡಲು ಸಿದ್ಧ... ಗಾರ್ಮೆಂಟಿನಲ್ಲಿಯೇ ಕೂಲಿಯಾದರೂ ಸರಿಯೆ... ಎಂದು ಘೋಷಿಸಿಬಿಟ್ಟಿದ್ದ. ಉಮಾ ಬಹಳ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದಳು. ಆಗಷ್ಟೇ, ನಗರಲ್ಲಿ ಸಾಕಷ್ಟು ಫುಡ್ ಡೆಲಿವರಿ ಕಂಪೆನಿಗಳು ತಲೆಯೆತ್ತಿದ್ದವು. ಕಂತಿನಲ್ಲಿ ಒಂದು ಸ್ಕೂಟರ್ ತೆಗೆದುಕೊಂಡು, ರಾಜು ಯಾವುದಾದರೂ ಫುಡ್ ಡೆಲಿವರಿ ಸಂಸ್ಥೆಗೆ ಕೆಲಸಕ್ಕೆ ಸೇರಿಕೊಳ್ಳುವುದೆಂದು ಚಿಂತಿಸಿದ ಉಮಾ, ಗಂಡನಿಗೆ ಬಿಡಿಸಿ ಹೇಳಿದಳು. ರಾಜು ಒಪ್ಪಿಕೊಂಡರೂ, ಏಕೋ ಏನೋ, ಮಕ್ಕಳಿಗೆ ಈ ವಿಷಯವನ್ನೆಲ್ಲಾ ಹೇಳುವುದು ಬೇಡ ಎಂಬುದು ಅವನ ಬಯಕೆಯಾಗಿತ್ತು. ಉಮಾ ಅದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಮನೆಗೆ ಹೊಸ ಸ್ಕೂಟರ್ ಬಂತು. ಮಕ್ಕಳಿಬ್ಬರೂ ಕುಣಿದು ಕುಪ್ಪಳಿಸಿದರು. ಸ್ಕೂಟರಿನ ಹಿಂಬದಿಯಲ್ಲಿ ಮಕ್ಕಳ ಹೆಸರನ್ನು, ಉಮಾ ಬೇಡವೆಂದರೂ ಕೇಳದೆ, ಮುಂಭಾಗದಲ್ಲಿ ಉಮಾಳ ಹೆಸರನ್ನೂ ಬರೆಸಿದ್ದ! ಉಮಾ, ಅವಳ ಸಹೋದ್ಯೋಗಿಯೊಬ್ಬರಿಗೆ ಪರಿಚಯವಿದ್ದ ಏಜೆಂಟ್ ಮೂಲಕ, ರಾಜುವಿಗೆ ಡಿಎಲ್